
# ಅಂದ ಚಂದದ ಬಾಂಧನಿ



ಕಡುಬಣ್ಣದ ನುಣುಪಾದ ಬಟ್ಟೆಯ ಮೇಲೆ ಸೀಕ್ವೆನ್ಸ್ ಹಾಗೂ ಚೌಕುಳಿಯ ಪ್ರಿಂಟ್ಸ್ ನೋಡಲು ಬಹಳ ಸುಂದರ. ಬಾಂಧನಿ ಪ್ರಿಂಟ್ಸ್ ಎಂದು ಕರೆಯುವ ಈ ಮಾದರಿಯ ಉಡುಪುಗಳಲ್ಲಿ ಸೀರೆ, ಗಾಗ್ರಾ, ಲೆಹಂಗಾ, ಸಲ್ವಾರ್, ದುಪಟ್ಟಾ.. ಹೀಗೆ ಎಲ್ಲ ವೈವಿಧ್ಯಗಳೂ ಲಭ್ಯ. ಫ್ಯಾಷನ್‌ಪ್ರಿಯರಿಗೆ ಸಖತ್ ಲುಕ್ ಕೊಡುವ ಈ ಬಾಂಧನಿ ಉಡುಗೆ ಟ್ರೆಂಡ್ ಎಂದಿಗೂ ಔಟ್‌ಡೇಟೆಡ್ ಎನಿಸುವುದೇ ಇಲ್ಲದಿರುವುದು ವಿಶೇಷ.

■ ಆಶಾ ಎಸ್. ಕುಲಕರ್ಣಿ

ಬದಲಾಗುತ್ತಿರುವ ಕಾಲಕ್ಕೆ ತಕ್ಕಂತೆ ಫ್ಯಾಷನ್ ಕೂಡ ಬದಲಾಗುತ್ತಿದೆ. ಅದರಲ್ಲೂ ಮಹಿಳೆಯರ ಫ್ಯಾಷನ್ ಎಂದರೆ ಕೇಳಬೇಕೆ ನಿತ್ಯವೂ ವಿನೂತನ. ಅವರು ದಿನಕ್ಕೊಂದು ತೊಡುವ ಬಟ್ಟೆಗಳ ಮೇಲೆ ಏನಾದರೊಂದು ವರೈಟಿ ಇರಬೇಕೆಂದು ಬಯಸುವುದು ಸಹಜ. ಕೆಲವರು ತಾವು ತೊಡುವ ಬಟ್ಟೆಗಳ ಮೇಲೆ ಸಿಂಪಲ್ಲಾಗಿ ಚಿಕ್ಕ ಚಿಕ್ಕ ಪ್ರಿಂಟ್ಸ್ ಇರಬೇಕೆಂದು ಬಯಸಿದರೆ, ಇನ್ನು ಕೆಲವರು ಕಲರ್‌ಫುಲ್ ಬಟ್ಟೆಗಳನ್ನು ತೊಡಬೇಕೆಂದು ಬಯಸುತ್ತಾರೆ. ಅವರ ಅಭಿರುಚಿಗೆ ಅನುಗುಣವಾಗಿ ವಸ್ತ್ರವಿನ್ಯಾಸಕಾರರು ಸಾಕಷ್ಟು ವೈವಿಧ್ಯಮಯ ಬಟ್ಟೆಗಳನ್ನು ಮಾರುಕಟ್ಟೆಗೆ ತಂದಿದ್ದಾರೆ. ಅವುಗಳಲ್ಲಿ ಇದೀಗ ಹೊಸ ಸೇರ್ಪಡೆ ಎಂದರೆ ಬಾಂಧನಿ ಪ್ರಿಂಟ್ಸ್.

ಬಾಂಧನಿ ಬಟ್ಟೆಗಳು ಎಂದರೆ ಹೇಗಿರುತ್ತವೆ, ಈ ತರಹದ ಬಟ್ಟೆಗಳನ್ನು ಹೇಗೆ ತಯಾರಿಸಲಾಗುತ್ತದೆ ಎಂಬ ಪ್ರಶ್ನೆ ಮೂಡುವುದು ಸಹಜ. ಬಾಂಧನಿ ಬಟ್ಟೆ ಎಂದರೆ, ಒಂದು ಬಟ್ಟೆಯ ತುಂಬೆಲ್ಲಾ ನಿಮಗೆ ಎಲ್ಲಿ ಬೇಕಾದರೂ ಬೇರೆ ಬೇರೆ ವಿನ್ಯಾಸದ ಕಾಳು ಇಲ್ಲವೇ ಬೇರೆ ಬೇರೆ ವಿನ್ಯಾಸದ ಕಲ್ಲುಗಳನ್ನು ದಾರದಿಂದ ಕಟ್ಟಿ, ಬಟ್ಟೆಯನ್ನು ನಿಮಗಿಷ್ಟವಾದ ಬಣ್ಣಗಳಲ್ಲಿ ಅದ್ದಿ, ಬಟ್ಟೆಯು ಒಣಗಿದ ನಂತರ ಕಟ್ಟಿದ ದಾರವನ್ನು ಬಿಚ್ಚಿದಾಗ, ಬಟ್ಟೆಯಲ್ಲಿ ನೀವು ದಾರ ಕಟ್ಟಿದ ಭಾಗಗಳನ್ನು ಹೊರತುಪಡಿಸಿ ಉಳಿದೆಲ್ಲಾ ಭಾಗಕ್ಕೆ ಬಣ್ಣ ಅಂಟಿಕೊಂಡಿರುತ್ತದೆ ಹಾಗೂ ದಾರ ಕಟ್ಟಿದ ಭಾಗದಲ್ಲಿ ಬಗೆ ಬಗೆಯ ವಿನ್ಯಾಸದ ಸುಂದರ ಚಿತ್ತಾರಗಳು ನಮಗೆ ಕಾಣಸಿಗುತ್ತವೆ. ಈ ರೀತಿ